ಕುಂದು ಕೊರತೆ

ಕಟ್ಟಡ ತ್ಯಾಜ್ಯ ವಿಲೇವಾರಿ ಮಾಡಿಸಿ

ಮಾನಸಗಂಗೋತ್ರಿಯಲ್ಲಿ ನೂತನವಾಗಿ ನಿರ್ಮಿಸಿರುವ ರಸಾಯನಶಾಸ್ತ್ರ ಪ್ರಯೋಗಾಯಲಯಗಳ ಹಿಂದೆ ಕಟ್ಟಡ ತ್ಯಾಜ್ಯ ಹಾಗೇ ಇದೆ. ಕಟ್ಟಡ ಕಾರ್ಯ ಪೂರ್ಣಗೊಂಡಿದ್ದರೂ ಇನ್ನೂ ತೆರವುಗೊಳಿಸಿಲ್ಲ. ವಿ.ವಿಯ ಆಡಳಿತ ಮಂಡಳಿ ಕೂಡಲೇ ಕಟ್ಟಡ ತ್ಯಾಜ್ಯ ವಿಲೇವಾರಿ ಮಾಡುವಂತೆ ಸೂಚಿಸಬೇಕು

ಅಭಿಷೇಕ್ ನಾಗರಾಜ್, ವಿದ್ಯಾರ್ಥಿ

ಕಸದ ಡಬ್ಬಗಳನ್ನು ಅಳವಡಿಸಿ

ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿ ಆವರಣದಲ್ಲಿರುವ ಬ್ಲಾಕ್-1 ವಿದ್ಯಾರ್ಥಿ ನಿಲಯದ ಹಿಂಭಾಗ ತ್ಯಾಜ್ಯ ಸುರಿಯಲಾಗಿದೆ.

ಅಲ್ಲದೇ, ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಿದ ನಂತರ ಉಳಿದ ಆಹಾರವನ್ನು ಇಲ್ಲೇ ಸುರಿಯಲಾಗಿದೆ. ಇದರಿಂದ ಆಹಾರ ಕೊಳೆತು ದಿನೇ-ದಿನೇ ಸೊಳ್ಳೆಗಳು ಹೆಚ್ಚುತ್ತಿವೆ. ವಿದ್ಯಾರ್ಥಿಗಳು ಸಾಂಕ್ರಾಮಿಕ ರೋಗ ಹರಡುವ ಭೀತಿಯಲ್ಲಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಶೀಘ್ರದಲ್ಲೇ ತ್ಯಾಜ್ಯ ವಿಲೇವಾರಿ ಮಾಡಿಸಬೇಕು ಹಾಗೂ ತ್ಯಾಜ್ಯ ಸಂಗ್ರಹಣೆಗೆ ಕಸದ ಡಬ್ಬಗಳನ್ನು ಇಡಬೇಕು.

ಪ್ರಶಾಂತ್ ಹಟ್ಟಿ, ವಿದ್ಯಾರ್ಥಿ

'ಎಟಿಎಂ' ಗಳಲ್ಲಿ ಹಣದ ಅಭಾವ!

ಚುನಾವಣೆ ದಿನಾಂಕ ಘೋಷಣೆಯಾದಾಗಿನಿಂದ ನಗರದ ಬಹಳಷ್ಟು ಎಟಿಂಗಳಲ್ಲಿ ಹಣದ ಅಭಾವ ತೀವ್ರವಾಗಿದೆ. ಬಲ್ಲಾಳ್ ವೃತ್ತದಲ್ಲಿರುವ ಮೂರು ಬ್ಯಾಂಕ್‌ಗಳ ಎಟಿಂಗಳಲ್ಲೂ ಹಣವಿಲ್ಲದೇ ಸಾರ್ವಜನಿಕರು ಪರದಾಡುವಂತಾಗಿದೆ. ಬಲ್ಲಾಳ್ ವೃತ್ತ ಮಾತ್ರವಲ್ಲದೇ ಇತರೆ ಬಡಾವಣೆಗಳ ಬಹಳಷ್ಟು ಎಟಿಂಗಳ ಸ್ಥಿತಿ ಹೀಗೆ ಇದೆ. ಸಾರ್ವಜನಿಕರ ಅನುಕೂಲಕ್ಕಾಗಿ ತೆರೆದಿರುವ ಎಟಿಂಗಳಲ್ಲಿ ಈ ರೀತಿ ಹಣದ ಅಭಾವ ಉಂಟಾದರೆ ಹೇಗೆ?, ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಂಡು ಸಮಸ್ಯೆ ಬಗೆಹರಿಸಬೇಕು.

-ಗಂಗಾಧರ, ಕೃಷ್ಣಮೂರ್ತಿಪುರಂ

ನೀರಿನ ಘಟಕ ಸ್ವಚ್ಛವಾಗಿರಲಿ

ಮೈಸೂರು ವಿಶ್ವವಿದ್ಯಾಲಯ ಮಾನಸಗಂಗೋತ್ರಿ ಆವರಣದಲ್ಲಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ವಿ.ವಿ. ಆಡಳಿತ ಮಂಡಳಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿದೆ. ಆದರೆ, ನೀರನ್ನು ಸಂಗ್ರಹಿಸುವ ಡ್ರಮ್ ಸುತ್ತಲೂ ಪಾಚಿ ಕಟ್ಟಿಕೊಂಡಿದ್ದು, ಅಶುಚಿತ್ವ ತಾಂಡವವಾಡುತ್ತಿದೆ. ಇದು ವಿದ್ಯಾರ್ಥಿಗಳ ಆರೋಗ್ಯದ ಮೇಲೂ ಪರಿಣಾಮ ಬೀರಲಿದೆ. ಸಂಬಂಧಪಟ್ಟ ಅಧಿಕಾರಿಗಳು ನೀರಿನ ಘಟಕಗಳನ್ನು ಸ್ವಚ್ಛಗೊಳಿಸುವಂತೆ ಸೂಚಿಸಬೇಕು.

ಪೃಥ್ವಿರಾಜ್ ಕೆ.ಬಿ, ಮಾನಸಗಂಗೋತ್ರಿ

ಕುಡಿಯಲು ನೀರು ಇಡಿ...

ಈಗಾಗಲೇ ಬೇಸಿಗೆಯಿಂದ ನಗರದ ಕರೆಗಳಲ್ಲಿ ನೀರು ಬತ್ತಿ ಹೋಗುತ್ತಿದೆ. ಅಂತರ್ಜಲದ ಮಟ್ಟವೂ ಕುಸಿಯುತ್ತಿದೆ. ಮನುಷ್ಯರಿಗೆ ಮಾತ್ರವಲ್ಲದೇ ಪ್ರಾಣಿ, ಪಕ್ಷಿಗಳಿಗೂ ನೀರಿನ ಕೊರತೆ ಉಂಟಾಗುತ್ತಿದೆ. ಆದ್ದರಿಂದ ನಗರದ ಜನತೆ ಪ್ರಾಣಿಗಳಿಗೆ ಕುಡಿಯಲು ನೀರು ಸಿಗುವಂತೆ ಮನೆಯ ಮುಂಭಾಗ ನೀರನ್ನು ಇಟ್ಟರೆ, ಪ್ರಾಣಿ ಪಕ್ಷಿಗಳಿಗೂ ದಾಹ ನೀಗುತ್ತದೆ.

ರಕ್ಷಿತಾ ವಿ., ಸರಸ್ವತಿಪುರಂ

ಚರಂಡಿಯಲ್ಲಿ ಕಸದ ರಾಶಿ ಸ್ವಚ್ಛಗೊಳಿಸಿ

ನಗರದ ಕಾಮಾಕ್ಷಿ ಆಸ್ಪತ್ರೆಯ ಕಾರ್ಪೊರೇಷನ್ ಬ್ಯಾಂಕ್ ಮುಂಭಾಗದಲ್ಲಿರುವ ಚರಂಡಿಯಲ್ಲಿ ಬಹುದಿನಗಳಿಂದ ತ್ಯಾಜ್ಯ ತುಂಬಿಕೊಂಡಿದ್ದು, ನೀರು ಹರಿಯದಂತಾಗಿದೆ. ಅಲ್ಲದೇ, ಸ್ಥಳೀಯರು ಇಲ್ಲಿ ಆಗಾಗ್ಗೆ ನೀರು ಸುರಿಯುವುದರಿಂದ ಸ್ಥಳದಲ್ಲೇ ಕಟ್ಟಿಕೊಂಡು ಸೊಳ್ಳೆಯ ತಾಣವೇ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಚರಂಡಿಯಲ್ಲಿರುವ ತ್ಯಾಜ್ಯವನ್ನು ವಿಲೇವಾರಿ ಮಾಡಿಸಿ, ಚರಂಡಿಯನ್ನು ಸ್ವಚ್ಛಗೊಳಿಸಬೇಕು.

ವಿ.ಪುರುಷೋತ್ತಮ

ಕೃಷ್ಣ ತಿಪ್ಪೂರು ಅವರ ಕೃತಿಗಳ ಲೋಕಾರ್ಪಣೆ

ಚಿಕ್ಕವಯಸ್ಸಿನಲ್ಲೇ ಪೌರಾಣಿಕ ನಾಟಕಗಳನ್ನು ನೋಡಿಕೊಂಡು, ಹರಿಕಥೆ ಕೇಳಿಕೊಂಡು ರಾಮಾಯಣ ಹಾಗೂ ಮಹಾಭಾರತದಿಂದ ಪ್ರಭಾವಿತರಾದ ಕೃಷ್ಣ ತಿಪ್ಪೂರು ಅವರು ಸಾಹಿತ್ಯದೆಡೆಗೆ ಒಲವು ಬೆಳೆಸಿಕೊಂಡವರು. ಹಲವಾರು ಕವನ ಸಂಕಲನ, ಸಣ್ಣಕಥೆ ಹಾಗೂ ನಾಟಕ ರಚನೆ ಮಾಡಿದ್ದಾರೆ. ವೃತ್ತಿಯಲ್ಲಿ ಕೃಷಿಕರಾಗಿ ಪ್ರವೃತ್ತಿಯಲ್ಲಿ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡವರು.

ಕೆ.ಆರ್.ನಗರ ತಾಲ್ಲೂಕಿನ ತಿಪ್ಪೂರು ಗ್ರಾಮದ ಯಾಲಕ್ಕಿಶೆಟ್ಟಿ ಹಾಗೂ ಲಕ್ಷ್ಮಮ್ಮ ಅವರ ಪುತ್ರರಾದ ಕೃಷ್ಣ ಅವರು ಓದಿದ್ದು ಬಿ.ಎ., ಬಿಡುವಿನ ವೇಳೆಯಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದರು.1999ರಲ್ಲಿ ಬರೆದ 'ತಿಪ್ಪೂರು' ಸಮಗ್ರ ಪರಿಚಯ ಮೊದಲ ಕೃತಿಯಾಗಿದೆ. ತನ್ನೂರಿನ ಸಾಮಾಜಿಕ, ರಾಜಕೀಯ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ತಿಳಿಸುವ ಕೃತಿಯಿದು. 'ಭೂಮಿ', 'ಅವ್ವನ ಅಕ್ಷರ', 'ಬೋಧಿ ವೃಕ್ಷದ ಕೆಳಗೆ', 'ಸರದಿಯಲ್ಲಿ ನಿಂತಿರುವೇ' ಇತರೆ ಕವನ ಸಂಕಲನಗಳು. 'ಅಪ್ಪ ಹೇಳಿದ ಕಥೆಗಳು' (ಸಣ್ಣಕಥೆಗಳು), 'ರಾಜ ಪ್ರವರ್ಧನ ಮಾನ'(ಮಕ್ಕಳ ನಾಟಕ), 'ಶ್ರೀರಾಮ ಪರೀಕ್ಷೆ', 'ಅಣಿ ಮಾಂಡವ್ಯ', 'ಭೂ ಶಾಂತಿ', 'ಎಲೆಮರೆ ಕಾಯಿಗಳು' ನಾಟಕಗಳಾಗಿವೆ.

ಇವರು, ಭೀಷ್ಮಮಹಾ ಕಾದಂಬರಿ ಬರೆಯುತ್ತಿದ್ದು, ಒಂದು ಸಾವಿರ ಪುಟಗಳನ್ನು ಪೂರೈಸಿದ್ದಾರೆ. 'ಭೀಷ್ಮ' ಮಹಾಕಾದಂಬರಿಯು ಮಹಾಭಾರತದ ಘಟನೆಗಳನ್ನು ಆಧರಿಸಿ, ಭೀಷ್ಮನ ಜೀವನದ ನೈಜ ಒಳ- ಹೊರಗನ್ನು ಬರೆಯುವ ಪ್ರಯತ್ನ ಮಾಡಲಾಗಿದೆ. ಯಾವುದೇ ಬರಹಗಳನ್ನು ಅನುಕರಣೆ ಮಾಡದೇ ನನ್ನ ಚಿಂತನೆಗಳಿಂದ ಹೊಸ ಪಾತ್ರವನ್ನು ಸೃಷ್ಟಿಸಿದ್ದೇನೆ ಎಂದು ಹೇಳುತ್ತಾರೆ ಕೃಷ್ಣ ತಿಪ್ಪೂರು.

'ನನ್ನ ಕವನಗಳಲ್ಲಿ ಬದುಕಿಗೆ ಹತ್ತಿರವಾದ ಅನುಭವ ಚಿತ್ರಣವಿರುತ್ತದೆ. ಜೀವನದಲ್ಲಿ ಕಂಡ ವಸ್ತು ವಿಚಾರ, ಘಟನೆಗಳ ಅನುಭವವೇ ಬರಹವಾಗಿದೆ' ಎನ್ನುತ್ತಾರೆ ಅವರು.

ಮಾರ್ಚ್ 31ರಂದು ಮೈಸೂರಿನ ಕಲಾಮಂದಿರದ ಮನೆಯಂಗಳ ವಿಭಾಗದಲ್ಲಿ ಸಂಜೆ 5 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಮಿತ್ರಕೂಟ ತಿಪ್ಪೂರು ವತಿಯಿಂದ ಕೃಷ್ಣತಿಪ್ಪೂರು ಅವರ 'ಚಂದ್ರಮನ ಗೂಡಿಗೆ', 'ಕಾಡಂಚಿನ ಮನೆ', 'ಸಾವಿರ ಪದಗಳ ಒಂದು ಸಾಲು'(ಕವನ ಸಂಕಲನಗಳು), 'ಮೈಸೂರಿನಿಂದ ವೈಷ್ಣೋದೇವಿಯತ್ತ' (ಪ್ರವಾಸ ಕಥೆ) ಕೃತಿಗಳನ್ನು ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಬಿಡುಗಡೆ ಮಾಡಲಿದ್ದಾರೆ.

ವಿದ್ವಾಂಸ ಕಬ್ಬಿನಾಲೆ ವಸಂತ ಭಾರದ್ವಾಜ್ ಕೃತಿ ಕುರಿತು ಮಾತನಾಡಲಿದ್ದಾರೆ. ಕರ್ನಾಟಕ ಲೋಕಸೇವಾ ಆಯೋಗದ ಮಾಜಿಸದಸ್ಯ ಬಿ.ಎಸ್.ಕೃಷ್ಣಪ್ರಸಾದ್, ಪ್ರಕಾಶಕ ಅಂಕನಹಳ್ಳಿ ಪಾರ್ಥ ಅತಿಥಿಗಳಾಗಿ ಭಾಗವಹಿಸಲಿದ್ದು, ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ವೈ.ಡಿ.ರಾಜಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ.

ಮುನ್ನೋಟ

ಮಾರ್ಚ್ 26, ಮಂಗಳವಾರ

ಗಾಂಧಿ ಕವಿಗೋಷ್ಠಿ



ಮೈಸೂರು ವಿ.ವಿ ಮಾನಸಗಂಗೋತ್ರಿಯ ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ ಹಾಗೂ ನವದೆಹಲಿಯ ಸಾಹಿತ್ಯ ಅಕಾಡೆಮಿ ವತಿಯಿಂದ ಮಾರ್ಚ್ 26ರಂದು ಗಾಂಧಿ ಕವಿಗೋಷ್ಠಿಯನ್ನು ಆಯೋಜಿಸಲಾಗಿದೆ.

ಬೆಳಿಗ್ಗೆ 10.30ಕ್ಕೆ ಗಾಂಧಿ ಭವನ ಆವರಣದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ನವದೆಹಲಿಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಚಾಲನೆ ನೀಡುವರು. ಅತಿಥಿಗಳಾಗಿ ಸಾಹಿತಿ ಸಿ.ಪಿ.ಕೃಷ್ಣಕುಮಾರ್, ಕವಿ ಡಾ.ಸಿದ್ದಲಿಂಗಯ್ಯ ಭಾಗವಹಿಸಲಿದ್ದು, ಮೈಸೂರು ವಿ.ವಿ.ಕುಲಪತಿ ಪ್ರೊ. ಜಿ.ಹೇಮಂತಕುಮಾರ್ ಅಧ್ಯಕ್ಷತೆ ವಹಿಸುವರು.

ರಂಗಕರ್ಮಿ ಎಚ್.ಜನಾರ್ದನ್ ಆಶಯಗೀತೆ ಹಾಡುವರು. ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಎಂ.ಎಸ್.ಶೇಖರ್ ಪ್ರಾಸ್ತಾವಿಕ ನುಡಿಗಳನ್ನಾಡುವರು. ಈ ವೇಳೆ ವಿವಿಧ ಜಿಲ್ಲೆಯ 16 ಕವಿಗಳು ಮಹಾತ್ಮ ಗಾಂಧೀಜಿ ಕುರಿತ ಕವಿತೆಗಳನ್ನು ವಾಚಿಸುವರು.

ವಿಚಾರಸಂಕಿರಣ

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಮಾರ್ಚ್ 26, 27ರಂದು ಬೆಂಗಳೂರಿನ ಥಿಯೇಟರ್ ರಿಸರ್ಚ್ ಸಂಸ್ಥೆಯ ಸಹಯೋಗದಲ್ಲಿ ವಿಶ್ವರಂಗಭೂಮಿ ದಿನದ ಪ್ರಯುಕ್ತ 'ಪ್ರಸ್ತುತ ಪ್ರದರ್ಶಕ ಕಲೆಗಳ ಮುಂದಿರುವ ಸವಾಲುಗಳು' ಕುರಿತು ರಾಷ್ಟ್ರಮಟ್ಟದ ವಿಚಾರಸಂಕಿರಣ ಹಮ್ಮಿಕೊಳ್ಳಲಾಗಿದೆ.

ಸಂಕಿರಣದಲ್ಲಿ ಪ್ರಸ್ತುತ ತಬಲಾ ಘರಾಣೆಗಳು ಎದುರಿಸುತ್ತಿರುವ ಸವಾಲುಗಳು, ಪ್ರದರ್ಶಕ ಕಲೆಗಳಲ್ಲಿ ಹಿಂದುಸ್ತಾನಿ ಸಂಗೀತದ ಸ್ಥಿತಿಗತಿ, ಶಿಕ್ಷಣದಲ್ಲಿ ಪ್ರದರ್ಶಕ ಕಲೆಗಳ ಅಳವಡಿಕೆ ಮತ್ತು ಸವಾಲುಗಳು, ಉದ್ಯೋಗಾವಕಾಶಗಳಲ್ಲಿ ವಾದ್ಯ ಕಲಾವಿದರು ಎದುರಿಸುತ್ತಿರುವ ಸವಾಲುಗಳು, ತಬಲ ಕ್ಷೇತ್ರದಲ್ಲಿ ಸಂಶೋಧನೆಗಳ ಪಾತ್ರ, ಪ್ರದರ್ಶಕ ಕಲೆಗಳು ಮತ್ತು ಸಂವಹನ ಮಾಧ್ಯಮಗಳು, ಸಂಗೀತ ವಾದ್ಯ ತಯಾರಿಕೆ ಮತ್ತು ಸಂರಕ್ಷಣೆ, ಪ್ರದರ್ಶನ ಕಲೆಗಳು ಮತ್ತು ಮೂಢ ನಂಬಿಕೆಗಳು, ಪ್ರದರ್ಶಕ ಕಲೆಗಳು ಮತ್ತು ನೇಪಥ್ಯ, ಶಾಸ್ತ್ರೀಯ ನೃತ್ಯ ಮತ್ತು ಆರೋಗ್ಯ, ಪ್ರದರ್ಶಕ ಕಲೆಗಳು ಮತ್ತು ಕನ್ನಡ ಸಾಹಿತ್ಯ, ಪ್ರದರ್ಶಕ ರಂಗಭೂಮಿಯಲ್ಲಿನ ಸವಾಲುಗಳು, ನೃತ್ಯ ಪ್ರದರ್ಶಕರ ಸವಾಲುಗಳು, ನೃತ್ಯ ಪ್ರದರ್ಶಕರಿಗಿರುವ ಆರ್ಥಿಕ ಸೇರಿದಂತೆ ಅನೇಕ ವಿಷಯಗಳ ಕುರಿತು ಪ್ರಬಂಧಗಳನ್ನು ಮಂಡಿಸಲಾಗುತ್ತಿದೆ. ಮಾಹಿತಿಗೆ ಮೊ.9964387644 ಸಂಪರ್ಕಿಸಬಹುದು.

ಉಷಾಹರಣ ನಾಟಕದ ದೃಶ್ಯ

ರಂಗೋತ್ಸವ

ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ವತಿಯಿಂದ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಮಾರ್ಚ್ 27ರಿಂದ 29ರ ವರೆಗೆ ಕಲಾಮಂದಿರದ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ 'ರಂಗೋತ್ಸವ' ಆಯೋಜಿಸಲಾಗಿದೆ.

ಮಾರ್ಚ್ 27ರಂದು ಸಂಜೆ 6ಕ್ಕೆ ಪ್ರೊ. ಕಾಳೇಗೌಡ ನಾಗವಾರ ರಂಗೋತ್ಸವಕ್ಕೆ ಚಾಲನೆ ನೀಡುವರು. ಪ್ರೊ.ಶೀಲಾಕುಮಾರಿ ವಿಶ್ವರಂಗಭೂಮಿ ದಿನಾಚರಣೆಯ ಸಂದೇಶ ವಾಚಿಸುವರು.

ಈ ಸಂದರ್ಭ ರಂಗಕರ್ಮಿಗಳಾದ ಗಂಗಾಧರಸ್ವಾಮಿ, ಪ್ರೊ.ಚ.ಸರ್ವಮಂಗಳಾ ಮತ್ತು ಮೈಮ್ ರಮೇಶ್ ಅವರನ್ನು ಸನ್ಮಾನಿಸಲಾಗುವುದು.

ಮಾರ್ಚ್ 27ರಿಂದ 29ರ ವರೆಗೆ ಸಂಜೆ 7ಕ್ಕೆ ನಾಟಕ ಪ್ರದರ್ಶನ ಆಯೋಜಿಸಲಾಗಿದೆ. ಮಾರ್ಚ್ 27ರಂದು ರಂಗಾಯಣ ನಿರ್ದೇಶಕರಾದ ಭಾಗೀರಥಿ ಬಾಯಿ ಕದಂ ಅವರ ನಿರ್ದೇಶನದ 'ಯಹೂದೀ ಹುಡುಗಿ' ನಾಟಕ, 28ರಂದು ನಟನ ರಂಗತಂಡದಿಂದ 'ಉಷಾಹರಣ' ನಾಟಕ ಮತ್ತು 29ರಂದು ಬೆಂಗಳೂರಿನ ಚಿತ್ತಾರ ತಂಡದಿಂದ 'ಸುಮ್ಮನೆ' ನಾಟಕಗಳು ಪ್ರದರ್ಶನಗೊಳ್ಳಲಿವೆ.

ಮಾರ್ಚ್ 27, ಬುಧವಾರ

'ಜಾನಪದ ಜೀವಾಳ' ಪ್ರಶಸ್ತಿ ಪ್ರದಾನ

ನೆಲೆ ಹಿನ್ನೆಲೆ, ಜನಮನ ಸಾಂಸ್ಕೃತಿಕ ಸಂಘಟನೆ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ವತಿಯಿಂದ ವಿಶ್ವ ರಂಗಭೂಮಿ ದಿನದ ಅಂಗವಾಗಿ, ರೈತ ನೇತಾರ ಕೆ.ಎಸ್. ಪುಟ್ಟಣ್ಣಯ್ಯ ಅವರ ಸ್ಮರಣಾರ್ಥ ಮಾರ್ಚ್ 27ರಂದು 'ಜಾನಪದ ಜೀವಾಳ' ರಂಗಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ.

ಸಂಜೆ 6ಕ್ಕೆ ಕಲಾಮಂದಿರದಲ್ಲಿ ನಡೆಯುವ ಕಾರ್ಯಕ್ರಮಕ್ಕೆ, ರಂಗಕರ್ಮಿ ಪ್ರೊ. ಜಿ.ಗೋವಿಂದರಾವ್ ಚಾಲನೆ ನೀಡುವರು. ಕೆ.ಆರ್. ಸುಮತಿ, ಗಾಯಕ ಸಿ.ಎಂ.ನರಸಿಂಹಮೂರ್ತಿ, ಸುನಿತಾ ಪುಟ್ಟಣ್ಣಯ್ಯ, ಬಡಗಲಪುರ ನಾಗೇಂದ್ರ ಅತಿಥಿಯಾಗಿ ಪಾಲ್ಗೊಳ್ಳುವರು. ಈ ವೇಳೆ ಗ್ರಾಮೀಣ ಪ್ರದೇಶದಲ್ಲಿ ರಂಗ ಕಲೆಯಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತದೆ. ಈ ಪ್ರಶಸ್ತಿಯು ₹ 25 ಸಾವಿರ ನಗದು, ವಿಶಿಷ್ಟ ಫಲಕ ಹಾಗೂ ಪ್ರಮಾಣ ಪತ್ರವನ್ನು ಒಳಗೊಂಡಿರುತ್ತದೆ.

ನಂತರ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗಾಯಕರಾದ ಪುಷ್ಪಲತಾ, ಚಿಂತನ್ ವಿಕಾಸ್, ಸಿ.ಎಂ.ನರಸಿಂಹಮೂರ್ತಿ, ದೇವಾನಂದ ವರಪ್ರಸಾದ್, ಹುರಗಲವಾಡಿ ರಾಮಯ್ಯ ಅವರು ಆಶಯ ಗೀತೆ, ರಂಗಗೀತೆ, ಜನಪದ, ತತ್ವಗೀತೆ ಹಾಗೂ ರೈತ ಗೀತೆಗಗಳನ್ನು ಹಾಡಿ ರಂಜಿಸಲಿದ್ದಾರೆ.

ವಿಶ್ವರಂಗಭೂಮಿ ದಿನಾಚರಣೆ

ಕರ್ನಾಟಕ ನಾಟಕ ಅಕಾಡೆಮಿ ಹಾಗೂ ನಟನ ರಂಗಶಾಲೆ ವತಿಯಿಂದ ರಾಮಕೃಷ್ಣನಗರದಲ್ಲಿರುವ ಮಂಡ್ಯ ರಮೇಶ್ ಅವರ ನಟನ ರಂಗಶಾಲೆಯಲ್ಲಿ ಬುಧವಾರ (ಮಾರ್ಚ್ 27) ವಿಶ್ವ ರಂಗಭೂಮಿ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಸಂಜೆ 6 ಗಂಟೆಗೆ ನಡೆಯುವ ಕಾರ್ಯಕ್ರಮವನ್ನು ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಉದ್ಘಾಟಿಸುವರು. ಅತಿಥಿಗಳಾಗಿ ಉದ್ಯಮಿ ಗುರು, ಸಂಸ್ಕೃತಿ ಪೋಷಕ ತುಕಾರಾಂ ಪಾಲ್ಗೊಳ್ಳುವರು. ಕಲಾವಿದೆ ಶ್ವೇತಾ ಮಡಪ್ಪಾಡಿ ವಿಶ್ವರಂಗದಿನದ ಸಂದೇಶವನ್ನು ವಾಚಿಸುವರು. ಸಂಜೆ 6.30ಕ್ಕೆ ನಟನ ರಂಗಶಾಲೆಯ ವಿದ್ಯಾರ್ಥಿಗಳು 'ಶೂದ್ರಕ'ನ ಮೃಚ್ಛಕಟಿಕ ನಾಟಕ ಪ್ರಸ್ತುತಪಡಿಸುವರು. ಮಾಹಿತಿಗೆ ಮೊ.9945555570 ಸಂಪರ್ಕಿಸಬಹುದು.

ಯುಗಾದಿ ಸಂಭ್ರಮಕ್ಕೆ ಕಲಾವೈಭವದ ಮೆರುಗು

ಯುಗಾದಿ ಹಬ್ಬಕ್ಕೆ ಶಾಪಿಂಗ್ ಮಾಡುವವರಿಗೆ ಇಲ್ಲಿದೆ ಅವಕಾಶ.

ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಮಾರ್ಚ್ 31ರವರೆಗೆ ನಡೆಯಲಿರುವ ಜಿಲ್ಲಾಮಟ್ಟದ ಗುಡಿ ಕೈಗಾರಿಕೆಗಳ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ಕುಶಲಕರ್ಮಿಗಳ ಉತ್ಪನ್ನಗಳು ಅನಾವರಣಗೊಂಡಿವೆ.

ಪ್ರತಿ ದಿನ ಬೆಳಿಗ್ಗೆ 10ರಿಂದ ರಾತ್ರಿ 9ರ ವರೆಗೆ ನಡೆಯುವ ಈ ಮೇಳದಲ್ಲಿ ಮನಸ್ಸಿಗೆ ಒಪ್ಪುವ, ಆಕರ್ಷಿಸುವ ವಸ್ತುಗಳ ಪ್ರದರ್ಶನವಿದೆ.

ಸಿಲ್ಕ್ ಉತ್ಸವ 2019: ರೇಷ್ಮೆ ಸೀರೆಗಳು, ಹತ್ತಿ ಸೀರೆಗಳು, ಕೈಮಗ್ಗದ ಸೀರೆಗಳು, ಮಧುಬನಿ ಸೀರೆಗಳು, ಕಾಂಜೀವರಂ ಸೀರೆಗಳ ಸಂಗ್ರಹವಿದೆ. ರಾಜಸ್ಥಾನ, ಪಶ್ಚಿಮ ಬಂಗಾಳ, ಗುಜರಾತ್, ಕೇರಳ, ತಮಿಳುನಾಡು ಮೊದಲಾದ ರಾಜ್ಯಗಳ ಸಾಂಪ್ರದಾಯಿಕ ಕುಶಲಕರ್ಮಿಗಳು ತಯಾರಿಸಿದ ಸೀರೆಗಳು, ಡ್ರೆಸ್ ಮೆಟೀರಿಯಲ್‌ಗಳು ಇವೆ.

ಮಣ್ಣಿನ ದೀಪಗಳು, ದೇವರ ವಿಗ್ರಹಗಳು, ಆಲಂಕಾರಿಕ ವಸ್ತುಗಳು, ಮಣ್ಣಿನಿಂದ ತಯಾರಿಸಿದ ಬುದ್ಧ, ಗಣಪತಿ, ಆನೆ, ಕುದುರೆ, ಹೂಜಿಗಳ ಸಂಗ್ರಹ ಈ ಮಳಿಗೆಯಲ್ಲಿದೆ. ಕನಿಷ್ಠ ₹100ರಿಂದ ಉತ್ಪನ್ನಗಳ ಬೆಲೆ ಆರಂಭವಾಗುತ್ತದೆ. ಸುಮಾರು 70 ಮಳಿಗೆಗಳಿವೆ

ಮಂಗಳಕರ ಕರ್ಮ ಸೀಮಂತೋನ್ನಯನ

ತಾರೋಡಿ ಸುರೇಶ

ಸೀಮಂತ ಸಂಸ್ಕಾರದಲ್ಲಿ ಒಂದು ವಿಶೇಷವಾದ ಮಂತ್ರವನ್ನು ಉಚ್ಚರಿಸಬೇಕು ಮತ್ತು ಆ ಮಂತ್ರವನ್ನು ವೀಣೆಯಲ್